ಕನ್ನಡ ನಾಡು ನುಡಿ ಜಾಗೃತಿಗೊಂದು ಸೃಜನ ಸಾಪ್ತಾಹಿಕ

# ಕನ್ನಡ ಗಂಗೋತ್ರಿ

ಸೆಪ್ಟೆಂಬರ್ ೧೨-೧೮

ರೂ.೪.೫೦



## ಡಾ। ಸಿದ್ಧಯ್ಯ ಪುರಾಣಿಕ ಒಂದು ನೆನಪು

## ಶಿಷ್ಟ ಸಂಸ್ಕೃತಿಯತ್ತ ಅಭಿನವ ಭಾರತಿ

## ಮತಾಂಧರ ಅಟ್ಟಹಾಸದಲ್ಲಿ ಭದ್ರಾವತಿ

## ಅರಕಲಗೂಡು : ಜೆ.ಒ.ಸಿ. ಖದೀಮರ ಜಾಲ

## 'ಕರ್ನಾಟಕ' - ಹಗರಣಗಳ ಸರಮಾಲೆ

## ಡಾ॥ ಸಿದ್ಧಲಿಂಗಯ್ಯನವ



## ಬರಗೂರರ



# ಡಾ।। ಸಿದ್ಧಯ್ಯ ಪುರಾಣಿಕ-ಒಂದು ನೆನಪು

ಭಾರತೀಯ ಭಾಷೆಯ ಯಾವುದೇ ಭಾಷೆಯ ಶ್ರೇಷ್ಠ ಕೃತಿಗೆ ಭಾರತೀಯ ಮಟ್ಟದ ಗೌರವವನ್ನು ನೀಡುವ ಒಂದು ಪ್ರಯತ್ನ ಮೊದಲಾದದ್ದು ಜ್ಞಾನಪೀಠ ಪ್ರಶಸ್ತಿಯಿಂದ.

ಇಂಥದೇ ಮತ್ತೊಂದು ಪ್ರಶಸ್ತಿ ಭಾರತೀಯ ಭಾಷೆಗಳಲ್ಲಿ ಶ್ರೇಷ್ಠವಾದ ಸಾಹಿತ್ಯ ಕೃತಿಗೆಂದು ಆರಂಭರಾದ ಕಲಕತ್ತೆಯ ಭಾರತೀಯ ಭಾಷಾ ಪರಿಷತ್ತು ಆರಂಭಿಸಿದ ಭಿಲ್ವಾರಾ ಪ್ರಶಸ್ತಿ. ೧೯೮೦ರಲ್ಲಿ ಇದು ಮೊದಲು ಆರಂಭವಾದಾಗ ಮೊದಲ ಪ್ರಶಸ್ತಿಗೆ ಪಾತ್ರವಾದವರು ಯಾರು ಗೊತ್ತೆ? ಗುಲಬರ್ಗಾ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ದ್ಯಾಂಪುರದ ಬಡ ಕುಟುಂಬವೊಂದರಲ್ಲಿ ಜನಿಸಿದ ಡಾ।। ಸಿದ್ಧಯ್ಯ ಪುರಾಣಿಕರು. ಅವರ ವಚನ ಸಂಕಲನ-ವಚನೋದ್ಯಾನಕ್ಕೆ ಅದು ಪ್ರಾಪ್ತವಾಯಿತು. ಕನ್ನಡಕ್ಕೆ ಭಾರತಮಟ್ಟದ ಗೌರವವನ್ನು ತಂದುಕೊಟ್ಟ ಈ ಕೃತಿ ಕನ್ನಡದ ಅತ್ಯದ್ಭುತ ಸಾಹಿತ್ಯ ಪ್ರಕಾರವಾದ ವಚನ ಪ್ರಕಾರಕ್ಕೆ ಸೇರಿರುವುದು ಅರ್ಥಪೂರ್ಣವಾದುದು.

ವಚನ ಸಾಹಿತ್ಯ, ಭಾಷೆ ಸಾಹಿತ್ಯಗಳ ದೃಷ್ಟಿಯಿಂದಲೇ ಅಲ್ಲದೆ ಬದುಕು ಹಾಗೂ ಸಾಹಿತ್ಯಗಳಿಗಿರುವ ಸಂಕೀರ್ಣ ಸಂಬಂಧಗಳನ್ನು, ಭಾಷೆಯ ಅಭಿವ್ಯಕ್ತಿ ಶಕ್ತಿಯ ವಿಶಿಷ್ಟ ಸ್ಥಿತಿಗಳನ್ನೂ, ಮೆರೆಯುವ ವಿಶಿಷ್ಟ ಅದ್ಭುತ ಸಾಹಿತ್ಯ. ಈ ಸಾಹಿತ್ಯ ೧೨ನೇ ಶತಮಾನದಲ್ಲಿ ನಡೆದ ಶರಣಕ್ರಾಂತಿಯ ಉಪವಸ್ತುವಾದರೂ ಸಾಹಿತ್ಯಕವಾದ ಅದರ ವಿಶಿಷ್ಟತೆ ಅದ್ಭುತವಾದದ್ದು. ದುರ್ದೈವವೆಂದರೆ ಇಂಥ ವಚನ ಸೃಷ್ಟಿ ಬಸವಣ್ಣನವರು ಕಲ್ಯಾಣವನ್ನು ಬಿಡಬೇಕಾಗಿ ಬಂದಾಗ ಇದ್ದಕ್ಕಿದ್ದಂತೆ ನಿಂತು ಹೋದದ್ದು. ಮತ್ತದು ಮೊಳೆತು ವಚನ ಸೃಜನಶೀಲವಾಗಲು ತೋಂಟದ ಸಿದ್ಧಲಿಂಗಯತಿಯವರೆಗೆ ಕಾಯಬೇಕಾಯಿತು. ತೋಂಟದ ಸಿದ್ಧಲಿಂಗನ ವಚನವನ್ನು ಮತ್ತೆ ಸೃಜನಶೀಲವಾಗಿ ಬಳಸಿದ [illegible] ಶತಮಾನದ ವಚನಗಳಿಗಿರುವ - ಸಮಾಜೋ-ಧಾರ್ಮಿಕ ಆಧ್ಯಾತ್ಮಿಕ-ಸಾಹಿತ್ಯಕ-ನೈತಿಕ ಹಾಗೂ ಭಾಷಿಕವಾದ ಸಂಕೀರ್ಣ ಆಯಾಮಗಳಿಲ್ಲ; ಸಾಮಾಜಿಕವಾದ ಕಳಕಳಿ-ಜವಾಬ್ದಾರಿಗಳು ಹಾಗೂ ಬದುಕಿನ ಬದ್ಧತೆಗಳು ಅದೇ ಪ್ರಮಾಣದಲ್ಲಿ ಇಲ್ಲ. ಈ ಹಿನ್ನೆಲೆಯಲ್ಲಿ ಸಿದ್ಧಲಿಂಗನ ವಚನಗಳು ಕೇವಲ ಒಂದು ಸಾಹಿತ್ಯ ಪ್ರಕಾರವಾಗಿ ಸಿದ್ಧಲಿಂಗನ ಧಾರ್ಮಿಕ ಅಗತ್ಯಗಳಿಗೆ ದುಡಿಯುವ ಮಾಧ್ಯಮವಾಗಿರುವುದು ವೇದ್ಯವಾಗುತ್ತದೆ.

ಇಷ್ಟನ್ನು ಹೇಳುವುದಕ್ಕೆ ಕಾರಣ ಎಂದರೆ ಆಧುನಿಕ ವಚನಗಳು ಕೇವಲ ಒಂದು ಸಾಹಿತ್ಯ ಪ್ರಕಾರವಾಗಿ ಮಾತ್ರ ರಚನೆಯಾಗಿವೆಯೆಂಬುದನ್ನು ಸೂಚಿಸುವುದು. ಈ ಹಿನ್ನೆಲೆಯಲ್ಲಿ



ಪ್ರೊ।। ಜೆ.ಎಸ್.

ನೋಡಿದಾಗ ಸಿದ್ಧಯ್ಯ ಪುರಾಣಿಕರು ವಚನೋದ್ಯಾನವನ್ನು ತೋಂಟದ ಸಿದ್ಧಲಿಂಗಯತಿಗೆ ಅರ್ಪಿಸಿರುವುದು ಅರ್ಥಪೂರ್ಣವಾಗಿದೆ.

ಹೊಸಗನ್ನಡ ವಚನಗಳನ್ನು ಬರೆದವರಲ್ಲಿ ಡಾ।। ಸಿದ್ಧಯ್ಯ ಪುರಾಣಿಕರೇ ಮೊದಲಿಗರೇನೂ ಅಲ್ಲ. ಡಾ. ಎಲ್.ವಿ. ರಂಗಣ್ಣನವರು ತಮ್ಮ ಸೃಜನಶೀಲತೆಗೆ ವಚನವೊಂದನ್ನೇ ಮಾಧ್ಯಮವಾಗಿ ಮಾಡಿಕೊಂಡರು. ಆಧುನಿಕವಾದ ಅನೇಕ ಕಾರ್ಯ ತಂತ್ರಗಳನ್ನವರು ವಚನಗಳಲ್ಲಿ ಪ್ರಯೋಗಿಸಿದ್ದಾರೆ. ಇನ್ನೊಬ್ಬ ಪ್ರಮುಖ ವಚನಕಾರರೆಂದರೆ ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರು. ಈ ಪಟ್ಟಿ ಹೀಗೇ ಬೆಳೆಯುತ್ತ ಹೋಗುವುದಾದರೂ ಆಧುನಿಕ ವಚನಕಾರರಲ್ಲಿ ಪ್ರಮುಖರಾದವರಲ್ಲಿ ಅತ್ಯಂತ ಗಮನಾರ್ಹವಾದ ಹೆಸರು ಸಿದ್ಧಯ್ಯ ಪುರಾಣಿಕರದು.

ವಚನೋದ್ಯಾನದ ಈ ಕೆಲವು ವಚನಗಳನ್ನು ಗಮನಿಸಿ:

೧) ನನಗೆ ತೋರಿದಂತೆ ಬರೆದರೆ
ಅದು ರಚನೆ
ನೀನು ತೋರಿಸಿದಂತೆ ಬರೆದರೆ
ಅದು ವಚನವಯ್ಯಾ
ಸ್ವತಂತ್ರಧೀರ ಸಿದ್ದೇಶ್ವರ ಪ್ರಭುವೇ.

೨) ವಿದ್ಯೆ ಬಂತು, ವಿನಯ ಹೋಯ್ತು,
ಬುದ್ಧಿಬಂತು, ಶ್ರದ್ಧೆ ಹೋಯ್ತು;
ಶ್ರದ್ಧೆ ಬಂತು, ವಿವೇಚನೆ ಹೋಯ್ತು;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು;
ವಿಜ್ಞಾನ ಬಂತು, ಸಮಾಧಾನ ಹೋಯ್ತು;
ಶರೀರ ಸ್ವಾಸ್ಥ್ಯ ಬಂತು, ಚಿತ್ತಸ್ವಾಸ್ಥ್ಯ
ಹೋಯ್ತು;
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ
ಹೋಯ್ತು
[illegible]
ಮಾತು ಬಂತು, ಕೃತಿ ಹೋಯ್ತು;
ಜಾತಿ ಬಂತು, ನೀತಿ ಹೋಯ್ತು;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು;
ಸಿದ್ಧಯ್ಯ ಪುರಾಣಿಕ ಬಂದ
ಸ್ವತಂತ್ರಧೀರ ಸಿದ್ದೇಶ್ವರ ಹೋದ.

ಮೊದಲನೆಯ ವಚನ ದೇವವಾಣಿ ಜನವಾಣಿಯಾಗಲು ನಿರಾಕರಿಸಿದಾಗ ಜನವಾಣಿಯನ್ನೆ ದೇವವಾಣಿಯಾಗಿ ಮಾಡಿದರು. ವಚನಕಾರರು ಎಂಬ ಪ್ರೊ. ಬಸವನಾಳರ ಮಾತನ್ನು ನೆನೆಯುವಂತೆ ಮಾಡುತ್ತದೆ. ನಾವು ಮಾತಾಡಿದರೆ ಯಾವುದು ಕೇವಲ ಮಾತಾಗಿ ಉಳಿಯುತ್ತದೆಯೋ ಅದೇ ವಚನವಾಗುತ್ತದೆ. ದೇವವಾಣಿಯಾದಾಗ ಎಂಬುದನ್ನು ತುಂಬ ಅರ್ಥಪೂರ್ಣವಾಗಿ ಮೂರೇ ಸಾಲುಗಳಲ್ಲಿ ಈ ವಚನ ಸೂಚಿಸುತ್ತದೆ.

ಎರಡನೆಯ ವಚನವಂತು ಜಾನಪದ ಹಾಡೊಂದರ ತಂತ್ರವೊಂದನ್ನು ಬಳಸಿಕೊಂಡು, ಅತ್ಯಪೂರ್ವ ವಚನವಾಗಿಬಿಟ್ಟಿದೆ. ಮೊದಲ ವಚನದಲ್ಲಿ ವಚನದ ಮೌಲ್ಯವನ್ನು ಇತ್ಯಾತ್ಮಕವಾಗಿಯೂ, ಎರಡನೆ ವಚನದಲ್ಲಿ ನೇತ್ಯಾತ್ಮಕವಾಗಿಯೂ ಧ್ವನಿಸುವ ಇಂಥ ವಚನಗಳನ್ನು ನೋಡಿದಾಗ ವಚನ ಸಿದ್ಧಯ್ಯ ಪುರಾಣಿಕರ ಪ್ರತಿಭೆಗೆ ಎಂಥ ಸಹಜವಾದ ಅಭಿವ್ಯಕ್ತಿಯಾಗಿದೆ ಎಂಬುದು ಮನವರಿಕೆಯಾಗುತ್ತದೆ.

ಫಲವಿತ್ತ ರೆಂಬೆ ಬಾಗುತ್ತದೆ
ಗೊನೆ ಹೊತ್ತ ಬಾಳೆ ಬಾಗುತ್ತದೆ
ತೆನೆ ಹೊತ್ತ ದಂಟು ಬಾಗುತ್ತದೆ
ಏನೇನೋ ಇಲ್ಲದುದು ಬೀಗುತ್ತದೆ
ನೋಡಾ
ಸ್ವತಂತ್ರ ಧೀರ ಸಿದ್ದೇಶ್ವರಾ.

ಹಣ್ಣನ್ನು ಕೊಟ್ಟ ರೆಂಬೆ ಬೀಗುವುದಿಲ್ಲ, ನಮ್ರವಾಗಿ ಬಾಗುತ್ತದೆ. ಹಾಗೆಯೇ ಗೊನೆಯನ್ನು ಹೊತ್ತ ಬಾಳೆಯೂ ನೆಲದವರೆಗೂ ಬಾಗುತ್ತದೆ. ಮತ್ತೆ ತೆನೆಯನ್ನು ಹೊತ್ತ ದಂಟು ಕೂಡ ಬಾಗುತ್ತದೆ. ಈ ಮೂರು ಸಂದರ್ಭಗಳಲ್ಲಿ ಸಮೃದ್ಧಿಯನ್ನು ತ್ಯಾಗಗಳ ನಮ್ರತೆ ಒಂದು ಕಡೆ ದುರಹಂಕಾರದ ಸೊಕ್ಕು ಒಂದು ಕಡೆ. ಬಾಗು ಮತ್ತೂ ಬೀಗು ಎಂಬ ಪದಗಳನ್ನು ಮುಖಾಮುಖಿಯಾಗಿಸಿ ಅರ್ಥಪೂರ್ಣವಾಗಿಸುತ್ತದೆ. ಆರಂಭದ ಕ್ರಿಯಾಪದಗಳು ಇತ್ತ, ಹೊತ್ತ ಮತ್ತು ಹೆತ್ತ ಎಂಬುವುಗಳಲ್ಲಿ ಪದದ ಬಳಕೆಯ ವೈವಿಧ್ಯದ ಜೊತೆಗೆ ಅರ್ಥಸ್ವಾರಸ್ಯ ಕೂಡ ಹೆಚ್ಚುವುದು ಈ ವಚನದ ವೈಶಿಷ್ಟ್ಯ.

ಇದೇ ಸಂಕಲನದ ಇನ್ನೂ ಕೆಲವು ಉದಾಹರಣೆಗಳನ್ನು ನೋಡಿ:

೧) ಹೂವು ತನ್ನೆದೆಯ ತೆರೆದರೆ
ಅದು ಸುಂಗಧ ಮಕರಂದಗಳ ಸುಗ್ಗಿ
ನೆಂಪುಗಳ ತನ್ನೆದೆಯ ತೆರೆದರೆ
ಮುತ್ತುಗಳು ಬರುವವು ನುಗ್ಗಿ
ಹನುಮ ತನ್ನೆದೆಯ ತೆರೆದರೆ
ಸೀತಾರಾಮರ ಚಿತ್ರ
ಇರುಳು ತನ್ನೆದೆಯ ತೆರೆದರೆ ಕೋಟಿ
ಕೋಟಿ
ನಕ್ಷತ್ರ
ಎಲ್ಲರೆದೆಗಳಲ್ಲಿ ಒಂದಿಲ್ಲೊಂದು ನಿಧಿ
ನಿಧಾನ
ನಿನ್ನ ವರಪ್ರದಾನ
ನನ್ನೆದೆಯಲ್ಲಿ ನೀನಾದರೂ ಇರಯ್ಯ
ಸ್ವತಂತ್ರಧೀರ ಸಿದ್ದೇಶ್ವರಾ.

೨) ದಾನವರನ್ನಾಗಿ ಮಾಡಿ ಬಾನಿಗೇರಿಸದಿರು
ದಾನವರನ್ನಾಗಿ ಮಾಡಿ ರಸಾತಳಕ್ಕೆ ಕಳಿಸದಿರು
ಮಾನವರನ್ನಾಗಿ ಮಾಡಿ ಇದೀ ಸುಂದರ
ಜಗತ್ತಿನಲ್ಲಿ
ಉಳಿಸಿ ಬೆಳೆಸಿ ಬೆಳಗಿಸಯ್ಯ
ಸ್ವತಂತ್ರಧೀರ ಸಿದ್ದೇಶ್ವರಾ.

೩) ಹಳೆರೆಕ್ಕೆ ಕಳಚಿದವು ಹೊಸರೆಕ್ಕೆ
ಕೊನರಿದವು
ಹಕ್ಕಿಮಾತ್ರ ಮೊದಲಿನದೇ ಅಯ್ಯ
ಹಣ್ಣೆಲೆಗಳು ಉದುರಿದವು ಹಸಿರೆಲೆಗಳು
ಚಿಗುರಿದವು
ಮರ ಮಾತ್ರ ಮೊದಲಿನದೇ ಅಯ್ಯ
ನಿನ್ನ ಹೆಸರಲ್ಲಿ ಹಳೆಹೊಸ ಗ್ರಂಥಪಂಥಗಳೂ
ವೇದಾಂತ ಸಿದ್ಧಾಂತ ರಾದ್ಧಾಂತಗಳಲ್ಲಿ
ಹುಟ್ಟಿದರೂ
ನೀನು ಮಾತ್ರ ಮೊದಲಿಗ
ಮೂಲಿಗರಲ್ಲಿ ಮೂಲಿಗನಯ್ಯ ಸ್ವತಂತ್ರ
ಧೀರ
ಸಿದ್ದೇಶ್ವರಾ.

೪) ಹೋಮರನಂಥ ವಿಶ್ವಕವಿಗಳು ಬಿಕ್ಷೆ
ಬೇಡಬೇಕು
ಹೆಂಡ ಮಾರುವವರು ಲಕ್ಷಾಧೀಶರಾಗಬೇಕು
ಇದು ನಿನ್ನ ಸಾಮಾಜಿಕ ನ್ಯಾಯವೇನಯ್ಯ
ದುಡಿದವರಿಗೆ ದುಗ್ಗಾಣಿ ದುಡಿಸಿಕೊಳ್ಳುವವ
ರಿಗೆ ಅಷ್ಟೈಶ್ವರ್ಯ
ಇದೇ ನಿನ್ನ [illegible]

ನಿಸಿ ಆಧುನಿಕ ವಚನಗಳಲ್ಲಿ ಸಿದ್ಧಯ್ಯ ಪುರಾಣಿಕರ ಪ್ರಾಮುಖ್ಯದ ಬಗ್ಗೆ ಗಮನಹರಿಸುವಂತೆ ಮಾಡುತ್ತದೆ.

ಅವರ ಎಂಟನೆಯ ವಚನ ಸಂಕಲನ-ವಚನನಂದನ. ಇದನ್ನು ಡಾ. ಶಿವಕುಮಾರಸ್ವಾಮಿಗಳಿಗೆ ಅರ್ಪಿಸಿದ್ದಾರೆ.

ವಿಚಿತ್ರವೆಂದರೆ ಇಲ್ಲಿಯ ವಚನಗಳು ವಚನೋತ್ತಮದತ್ತ ಮುಕ್ತಾಭಿವ್ಯಕ್ತಿಯಿಂದ



ಛಂದೋಬದ್ಧತೆಯತ್ತ ಹೊರಳುತ್ತಿರುವುದು. ಇದರಲ್ಲಿ ೪೭೫ ವಚನಗಳಲ್ಲಿ ವಸ್ತು ವೈವಿಧ್ಯವೇನೊ ವಿಪುಲವಾಗಿದೆ, ಆದರೆ ವಚನೋದ್ಯಾನದಲ್ಲಿ ಕಂಡು ಬರುವ ಸಹಜ ಚೆಲುವು ಈ ಸಂಕಲನದಲ್ಲಿ ಕಾಣುವುದು ಬಹಳ ಕಡಿಮೆಯೇ.

ಈ ಎರಡು ವಚನಗಳ ಸಂಕಲಗಳನ್ನು ಗಮನಿಸಿದರೆ ವಚನ ಪ್ರಕಾರ ಅವರ ಪ್ರತಿಭೆಗೆ ಹೇಳಿ ಮಾಡಿಸಿದಂಥ ಅಭಿವ್ಯಕ್ತಿ ಮಾಧ್ಯಮವಾಗಿದೆಯೆನ್ನಿಸುತ್ತದೆ.

ಕನ್ನಡ ಕವಿತೆಯ ಬಗ್ಗೆ ಒಮ್ಮೆ ಮಾತನಾಡುತ್ತಿದ್ದಾಗ ನವ್ಯ, ದಲಿತ, ಬಂಡಾಯ ಹಾಗೂ ನವ್ಯೋತ್ತರಗಳ ಪಂಥಗಳನ್ನು ಹಾದು ಬಂದ ನಿಮಗೆ ಈ ಪಂಥಗಳ ಬಗೆಗೆ ಏನನ್ನಿಸುತ್ತದೆ ಎಂದಾಗ ಅವರ ಮಾತು ಸ್ಪಷ್ಟವಾಗಿತ್ತು, ಕನ್ನಡ ಕಾವ್ಯದ ಸಾಹಿತ್ಯವನ್ನೂ ತನ್ಮಯತೆಯನ್ನೂ ಉಳಿಸಿಕೊಳ್ಳಲು ಹೆಣಗಿದ ತಿರುವುಗಳು ಅವು ಎಂದು ಅವರು ನುಡಿದರು. ಮಂಕು ತಿಮ್ಮನ ಕಗ್ಗದ ರೀತಿಯಲ್ಲಿ ಮರುಳುಸಿದ್ಧನ ಕಂತೆಯನ್ನು ಪ್ರಕಟಿಸಿದ್ದರೂ ನನ್ನ ಮನಸ್ಸನ್ನು ತುಂಬಿಕೊಂಡಿರುವುದು ಶರಣಸಾಹಿತ್ಯ ಎಂದದ್ದುಂಟು. ಇತ್ತೀಚೆಗೆ ಅವರು [illegible]

